ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಎಲ್ಲಾ ಇಲಾಖೆಯವರನ್ನು ತಂದು ಈ ಟೇಬಲ್ ಮೇಲೆ ಇರಲಿಕ್ಕೆ ಆಗುವುದಿಲ್ಲ.

ಎಸ್ಟಿಮೇಟ್ ಇನ್‌ಫ್ಲೇಟ್ ಆಗಿದೆ ಎಂದು ಹೇಳುವುದಕ್ಕೆ ನಾನು ತಜ್ಞ ಅಲ್ಲ ನೀವು ಏನೂ ತಜ್ಞರಲ್ಲ. There is a procedure. ಯಾವುದೇ ಎಸ್ಟಿಮೇಟನ್ನು ಸ್ಕೃಟಿನಿ ಮಾಡುವಾಗ Before we give technical sanction to an estimate, there is a Technical Committee which is empowered to scrutinise the estimates.

ಇದರ ಬಗ್ಗೆ ನಾನು ಇಲ್ಲಿ ಚರ್ಚೆಗೆ ಬರುವುದಿಲ್ಲ. ಆದರೆ ಈ ಹಣ ದುರುಪಯೋಗವಾಗಿದೆ ಎಂದರೆ ಈ ಸದನದ ಒಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಇದೆ. ಅದನ್ನು ಇನ್‌ಫ್ಲೇಟ್ ಮಾಡಿದ್ದಾರೋ, ಹೆಚ್ಚು ದುರುಪಯೋಗ ಮಾಡಿದ್ದಾರೋ, ಏನು ಮಾಡಿದ್ದಾರೋ ಎಂದು ನೋಡಲಿಕ್ಕೆ ನೀವೆಲ್ಲರೂ ಹಿರಿಯ ಸದಸ್ಯರುಗಳಿದ್ದೀರಿ. ಬಹುಶಃ ಪಿ.ಎ.ಸಿ. ಛೇರ್‌ಮನ್‌ಷಿಪ್ ಅಪ್ಪೋಷಿಷನ್‌ಗೆ ಹೇಗೂ ಹೋಗುತ್ತದೆ. ನೀವು ತರಿಸಿಕೊಳ್ಳಿ. Call those Engineers, hammer them. That is a Forum. This House cannot it here.

ಇಲ್ಲಿ ರೇಟ್‌ಇನ್‌ಫ್ಲೇಟ್ ಆಗಿದೆ ಎಂದು ಹೇಳುವುದಕ್ಕೆ ಈ ಸದನ ಇಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. Nobody can do that now. We have got is better job to do it. There is a Legislature Committee which is going to function as a Mini-Legislature. You summon those Officers. Take decisions based on the evidence given by the officers in that committee and submit a report to this House. I am not going to suppress any information. If the Committee wants, I will direct the Officers to produce any document

ಇದಕ್ಕಿಂಥ ಇದರ ಬಗ್ಗೆ ಮತ್ತು ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ನಾನು ಮೊದಲೇ ಹೇಳಿದ್ದೇನೆ. ನಿಮ್ಮಲ್ಲಿ ದಾಖಲಾತಿಗಳು ಇದ್ದರೆ ನಾನು ಚರ್ಚೆಗೆ ಸಿದ್ಧನಾಗಿದ್ದೇನೆ. ನಾಳೆ ಮತ್ತೆ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲ ಎಂದರೆ ನಾನು ಏನು ವಿವರಣೆ ಕೊಟ್ಟಿದ್ದೇನೆ. ಬಹುಶಃ ಸಭೆಯ ಒಂದು ವಿಶ್ವಾಸಕ್ಕೆ ತೆಗೆದುಕೊಂಡು ಈ ಒಂದು ನಿರ್ಣಯವನ್ನು ಕೊಟ್ಟಿದ್ದೇನೆ. ಇದಕ್ಕಿಂತ ಮತ್ತೆ ನಾನು ಏನೂ ಸರ್ಕಾರದ ವತಿಯಿಂದ ಹೇಳುವುದಕ್ಕೆ ಸಿದ್ಧನಿಲ್ಲ. ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಿ, ತಾವು ಯಾವುದೇ ಸಂದರ್ಭದಲ್ಲಿ ಇದೇ ವಿಷಯವನ್ನು ಪ್ರಸ್ತಾಪ ಮಾಡಬೇಕು ಎಂದು ಇದ್ದರೆ, The Government is ready and on behalf of the Government, I am prepared to answer. I sought your permission; please permit me to go out of the House.

(INTERRUPTIONS)

ಶ್ರೀ ಬಿ.ಎಸ್. ಯಡಿಯೂರಪ್ಪ : ಲೋಕೋಪಯೋಗಿ ಇಲಾಖೆಯ ಟೆಂಡರ್‌ನ್ನು 26ನೇ ತಾರೀಖು ಓಪನ್ ಆದ ಮೇಲೆ ಇದನ್ನು ರದ್ದು ಮಾಡುತ್ತೇವೆ ಎಂಬ ಮಾತನ್ನು ಮಾನ್ಯ ಸಭಾನಾಯಕರು ಹೇಳಿಲ್ಲ. ಈ ಒಂದು ದೊಡ್ಡ ಅವ್ಯವಹಾರ ನಡೆಯುತ್ತಿದೆ. ಅದಕ್ಕೆ ಪರೋಕ್ಷವಾಗಿ ಬೆಂಬಲ ಕೊಡುವಂತಹ ಮಾತು ಇದು ಆಗಬಹುದು ಎಂದು ನಮಗೆ ಅನುಮಾನ ಬರುತ್ತದೆ. ಇವತ್ತು ಈ ಒಂದು ಟೆಂಡರ್‌ನ್ನು ರದ್ದು ಮಾಡಿ ಹೊಸದಾಗಿ ಎಸ್ಟಿಮೇಟ್ ಮಾಡಿ ಈ ಕೆಲಸವನ್ನು ಪ್ರಾರಂಭ ಮಾಡಬೇಕು ಎಂಬ ಒತ್ತಾಯ ನನಗೆ ಇತ್ತು. ಸಭಾನಾಯಕರು ಇದಕ್ಕೆ ಒಪ್ಪಲಿಲ್ಲ. ಇವತ್ತು ಏನು ಅವ್ಯವಹಾರಗಳು ನಡೆಯುತ್ತಿವೆ ಅದಕ್ಕೆ ಪರೋಕ್ಷವಾಗಿ

ಬೆಂಬಲವನ್ನು ಕೊಡುತ್ತಿರುವಂತಹ ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ನಾವು ವಾಕೌಟ್ ಮಾಡುತ್ತಿದ್ದೇವೆ. ಚುನಾವಣೆ ದಿನಾಂಕ ಘೋಷಣೆ ಆದ ಮೇಲೆ.

(ಈ ಹಂತದಲ್ಲಿ ಬಿಜೆಪಿಯ ಮಾನ್ಯ ಸದಸ್ಯರುಗಳು ಸಭೆಯಿಂದ ಸಭಾತ್ಯಾಗ ಮಾಡಿದರು.)

**ii) ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿಯ ಶಿವಪುರ ಗ್ರಾಮದಲ್ಲಿರುವ ಪಡಿತರ ನ್ಯಾಯ ಬೆಲೆ ಅಂಗಡಿಯಲ್ಲಿ ಆಗಿರುವ ಅವ್ಯವಹಾರ.**

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ತಮ್ಮ ಕೊಠಡಿಗೆ ಬಂದು ನ್ಯಾಯ ಬೆಲೆ ಅಂಗಡಿಗಳಲ್ಲಿ ಆಗತಕ್ಕಂಥ ದೊಡ್ಡ ಕರ್ಮಕಾಂಡದ ಬಗ್ಗೆ ಕೆಲವು ವಿಚಾರಗಳನ್ನು ಶೂನ್ಯ ವೇಳೆಯಲ್ಲಿ ತಮ್ಮ ಗಮನಕ್ಕೆ ತರಬೇಕೆಂದು ಕೇಳಿದಾಗ ತಾವು ಅದಕ್ಕೆ ಅಪ್ಪಣೆ ಕೊಟ್ಟಿದ್ದೀರಿ. ಉದಾಹರಣೆಗೆ ಬೆಂಗಳೂರಿನ ಉತ್ತರ ತಾಲ್ಲೂಕು ಯಶವಂತಪುರ ಹೋಬಳಿಯ ಶಿವಪುರ ಗ್ರಾಮದಲ್ಲಿರುವ ಪ್ರದೇಶದಲ್ಲಿ ಶ್ರೀ ಲಕ್ಷ್ಮಿ ವೆಂಕಟೇಶ್ವರ ಪ್ರಸನ್ನ ಪಡಿತರ ನ್ಯಾಯ ಬೆಲೆ ಅಂಗಡಿ ಇದೆ. ಈ ತರಹದ ನ್ಯಾಯ ಬೆಲೆ ಅಂಗಡಿಗಳಲ್ಲಿ ಸರ್ಕಾರದವರು ಒದಗಿಸಿರತಕ್ಕಂಥ ಕಾರ್ಡುಗಳು. ಅದರಲ್ಲಿ ಕೊಡತಕ್ಕಂಥ ಪಡಿತರ ಪದಾರ್ಥಗಳಿಗೆ ಸರ್ಕಾರದಿಂದ ಸಹಾಯಧನವನ್ನು ಕೊಡುತ್ತಿದ್ದಾರೆ. ಈ ಪ್ರಕಾರ ಕರ್ನಾಟಕ ರಾಜ್ಯದ ಎಲ್ಲಾ ಕಡೆಗೂ ಸುಮಾರು ಸಾವಿರಾರು ನ್ಯಾಯ ಬೆಲೆ ಅಂಗಡಿಗಳು ಇದೆ. ಈ ತರಹದ ನ್ಯಾಯ ಬೆಲೆ ಅಂಗಡಿಗಳಲ್ಲಿ ಸರ್ಕಾರದವರು ಒದಗಿಸಿರತಕ್ಕಂಥ ಹಸಿರು ಕಾರ್ಡುಗಳು ಮತ್ತು ಕೆಂಪು ಕಾರ್ಡುಗಳಿವೆ. ಹಸಿರು ಕಾರ್ಡುಗಳು ಅತೀ ಬಡವರಿಗೆ ಕೊಡತಕ್ಕಂಥ ಕಾರ್ಡುಗಳು. ಅದರಲ್ಲಿ ಕೊಡತಕ್ಕಂಥ ಪಡಿತರ ಪದಾರ್ಥಗಳಿಗೆ ಸರ್ಕಾರದಿಂದ ಸಹಾಯಧನವನ್ನು ಕೊಡುತ್ತಿದ್ದಾರೆ. ಈ ಪ್ರಕಾರ ಕರ್ನಾಟಕ ರಾಜ್ಯದ ಎಲ್ಲಾ ಕಡೆಗೂ ಸುಮಾರು ಸಾವಿರಾರು ನ್ಯಾಯ ಬೆಲೆ ಅಂಗಡಿಗಳು ಇವೆ. ಈ ನ್ಯಾಯ ಬೆಲೆ ಅಂಗಡಿಗಳಲ್ಲಿ ಕಡು ಬಡುವರಿಗೆ ಎಂದು ಹೇಳಿ ಹಸಿರು ಕಾರ್ಡುಗಳನ್ನು ಹಂಚಿದ್ದಾರೆ. ಈ ಹಂಚಿಕೆ ವ್ಯವಸ್ಥೆ ಸರ್ಕಾರದ ದೃಷ್ಟಿಯಲ್ಲಿ ನಾವು ಬಡವರಿಗೆ ಮಾಡಿದ್ದೇವೆ, ಹಸಿರು ಕಾರ್ಡಿನ ಮೂಲಕ ಹಂಚತಕ್ಕಂಥ ವ್ಯವಸ್ಥೆ ನಾವು ಬಡವರಿಗೆ ಬಹಳ ಅನುಕೂಲ ಮಾಡಿದ್ದೇವೆ, ಹಸಿರು ಕಾರ್ಡಿನ ಮೂಲಕ ಹಂಚತಕ್ಕಂಥ ವ್ಯವಸ್ಥೆ ನೇರವಾಗಿ ಬಡವರಿಗೆ ಬಹಳ ಅನುಕೂಲ ಮಾಡಿದ್ದೇವೆ, ಹಸಿರು ಕಾರ್ಡಿನ ಮೂಲಕ ಹಂಚತಕ್ಕಂಥ ವ್ಯವಸ್ಥೆ ನೇರವಾಗಿ ಬಡವರಿಗೆ ತಲುಪುತ್ತದೆ ಎನ್ನತಕ್ಕಂಥ ಚಿಂತನೆ ಸರ್ಕಾರಕ್ಕೆ ಇದೆ.

ಸರ್ಕಾರ ನ್ಯಾಯ ಬೆಲೆ ಅಂಗಡಿಗಳಲ್ಲಿ ನ್ಯಾಯವಾಗಿ ಪಡಿತರ ಪದಾರ್ಥಗಳನ್ನು ಹಂಚುತ್ತಿದ್ದಾರೆಯೇ ಎನ್ನತಕ್ಕಂಥ ಮೇಲ್ವಿಚಾರಣೆ ಇಟ್ಟಿದ್ದೇವೆ, ತಹಸೀಲ್ದಾರರು ಅದನ್ನು ನೋಡಿಕೊಳ್ಳುತ್ತಿದ್ದಾರೆ ಎಂದು ಅವರು ಹೇಳಬಹುದು. ಆದರೆ ಈ ಕ್ಷಣದವರೆಗೆ ಆಗಿಲ್ಲ, ನನಗೆ ಗೊತ್ತಿರುವ ಹಾಗೆ ಸಾವಿರಾರು ಪಡಿತ ಹಸಿರು ಕಾರ್ಡುಗಳು ಬೇನಾಮಿ ಹೆಸರಿನಿಂದ, ಯಾರು ಊರಿನಲ್ಲಿ ಇಲ್ಲ ಅಂಥವರ ಹೆಸರಿನಲ್ಲಿ ನ್ಯಾಯ ಬೆಲೆ ಅಂಗಡಿಯವರೂ, ಮತ್ತು ಅಧಿಕಾರಿಗಳು ಹೊಂದಾಣಿಕೆ ಮಾಡಿಕೊಂಡು ಕಾರ್ಡುಗಳನ್ನು ಪಡೆದು, ಆ ಕಾರ್ಡುಗಳಲ್ಲಿ ಅಕ್ಕಿಯನ್ನು, ಆಹಾರ ಪದಾರ್ಥಗಳನ್ನು ಪಡೆದುಕೊಳ್ಳುತ್ತಿದ್ದಾರರೆ, ಈ ನೋಂದಾವಣೆ ರಿಜಿಸ್ಟರ್‌ನಲ್ಲಿ ಬರೆದುಕೊಳ್ಳುವಾಗ ಒಂದು ರೀತಿಯ ಮೋಸ ಜಾಲ ನಡೆಯುತ್ತಿದೆ. ಇಡೀ ಕರ್ನಾಟಕದಾದ್ಯಂತ, ಈ ಜಾಲದ ಬಗ್ಗೆ ಸಮಗ್ರವಾಗಿ ಸಂಪೂರ್ಣ ತನಿಖೆಯನ್ನು ಕೂಡಲೇ ಸರ್ಕಾರದಿಂದ ನಡೆಸುತ್ತೇವರೆ ಎನ್ನತಕ್ಕಂಥ ಭರವಸೆಯನ್ನು ಕೊಡಬೇಕು. ಉದಾಹರಣೆಗಾಗಿ ಒಂದು ನ್ಯಾಯ ಬೆಲೆ ಅಂಗಡಿಯಲ್ಲಿ ಬೇ-ನಾಮಿ ಹೆಸರಿನಿಂದ ಆಗಿರತಕ್ಕಂಥ ಹಸಿರು ಕಾರ್ಡನ್ನು ತಮ್ಮ ಮೂಲಕ ಮಾನ್ಯ ಆಹಾರ ಸಚಿವರಿಗೆ ಈಗ ನಾನು ಕಳುಹಿಸಿಕೊಡುತ್ತಿದ್ದೇನೆ. ಅವರು ಈ ಬಗ್ಗೆ ಸಮಗ್ರ ತನಿಖೆ ಮಾಡಿಸಬೇಕು. ನಾನು ಕೇವಲ ಒಂದು ಅಂಗಡಿಯ